ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ದೇವದುರ್ಗ ರವರ ನ್ಯಾಯಾಲಯ, ದೇವದುರ್ಗ.

**ಸಿ ಸಿ ನಂ.405/2023**

ಪಿರ್ಯಾದುದಾರರು : ಕರ್ನಾಟಕ ರಾಜ್ಯ,
ಗಬ್ಬೂರು ಪೊಲೀಸ ಠಾಣೆ,
ಗಬ್ಬೂರು.

– ವಿರುದ್ಧ –

ಆರೋಪಿತರುಃ 1. ಬಸವರಾಜ ಕವಟಗಿ ತಾಯಿ ಶಾಂತವ್ವ.
ವಯಸ್ಸುಃ 31 ವರ್ಷಗಳು, ಉಃ ಮುಖ್ಯಗುರುಗಳು
ಎರವಲು ಸ.ಕಿ.ಪಾ.ಶಾಲೆ. ಹಿರೇ ಕೂಡಿಗಿ,
ವಾಸಃ ಚಿಕ್ಕಪಡಸಲಗಿ, ತಾಃ ಜಮಖಂಡಿ,
ಜಿಃ ಬಾಗಲಕೋಟೆ.

2. ಲಕ್ಕಪ್ಪ ತಂದೆ ವಿರುಪಾಕ್ಷಪ್ಪ. ವಯಸ್ಸುಃ 36 ವರ್ಷಗಳು,
ಉಃ ಎಸ್.ಡಿ.ಎಂ.ಸಿ ಅಧ್ಯಕ್ಷ & ಒಕ್ಕಲುತನ,
ವಾಸಃ ಹಿರೇಕೂಡ್ಲಿಗಿ.

**ದೋಷಾರೋಪಣೆ**

ನಾನು ಸುರೇಶ ಅಣ್ಣಪ್ಪ ಸವದಿ, ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ದೇವದುರ್ಗ, ಈ ಮೂಲಕ ಆರೋಪಿತರಾದ ನಿಮ್ಮ ಮೇಲೆ ಈ ಕೆಳಗಿನಂತೆ ಹೊರಿಸುವ ದೋಷಾರೋಪಣೆ ಏನೆಂದರೆ,

ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಗಬ್ಬೂರು ಪೊಲೀಸ ಠಾಣೆ ಹದ್ದಿ ಪೈಕಿ ದೇವದುರ್ಗ ತಾಲ್ಲೂಕು, ಹಿರೇ ಕೂಡ್ಲಿಗಿ ಗ್ರಾಮದಲ್ಲಿ 1 ಮತ್ತು 2 ನೇ ಆರೋಪಿತರು 2012-13 ನೇ ಸಾಲಿನಲ್ಲಿ ಹಿರೇಕೂಡ್ಲಿಗಿ ಸ.ಕಿ.ಪ್ರಾ.ಶಾಲೆಯ ಹೆಚ್ಚುವರಿ 02 ಶಾಲಾ ಕೊಠಡಿಗಳ ನಿರ್ಮಾಣಕ್ಕಾಗಿ ಎಸ್.ಎಸ್.ಎ. ಯೋಜನೆ ಅಡಿಯಲ್ಲಿ ಬಂದಿರುವ ರೂ.5,27,000/- ಗಳು ಮತ್ತು ಶಾಲೆಯ ಇತರೆ ಅನುದಾನ ಸೇರಿ ಒಟ್ಟು ರೂ.7,01,224/- ಗಳನ್ನು ಎಸ್.ಎಸ್.ಎ ನಿಯಮಾವಳೀಗಳನ್ನು ಗಾಳಿಗೆ ತೂರಿ ಶಾಲಾ ಮುಖ್ಯಗುರುಗಳು ಮತ್ತು ಎಸ್.ಡಿ.ಎಂ.ಸಿ ಅಧ್ಯಕ್ಷರ ಹೆಸರಿನಲ್ಲಿ ಸ್ಟೇಟ್ ಬ್ಯಾಂಕ್ ಆಪ್ ಮೈಸೂರು, ದೇವದುರ್ಗ ಶಾಖೆಯಲ್ಲಿರುವ ಜಂಟಿ ಖಾತೆ ನಂ.6408270938

ನೇದ್ದರಲ್ಲಿ ಜಮಾ ಆಗಿದ್ದ ಹಣವನ್ನು ದಿನಾಂಕ 16.09.2015 ರಂದು 20,000/- ರೂಪಾಯಿಗಳು, ದಿನಾಂಕ 16.09.2015 ರಂದು 95,000/- ರೂಪಾಯಿಗಳು, ದಿನಾಂಕ 15.10.2015 ರಂದು 70,000/- ರೂಪಾಯಿಗಳು, ದಿನಾಂಕ 03.11.2015 ರಂದು 1,50,000/- ರೂಪಾಯಿಗಳು, ದಿನಾಂಕ 11.11.2015 ರಂದು 51,224/- ರೂಪಾಯಿಗಳು, ದಿನಾಂಕ 04.12.2015 ರಂದು 25,000/- ರೂಪಾಯಿಗಳು, ದಿನಾಂಕ 28.12.2015 ರಂದು 30,000/- ರೂಪಾಯಿಗಳು, ದಿನಾಂಕ 31.12.2015 ರಂದು 50,000/- ರೂಪಾಯಿಗಳು, ದಿನಾಂಕ 06.01.2016 ರಂದು 50,000/- ರೂಪಾಯಿಗಳು, 30.01.2016 ರಂದು 95,000/-, ದಿನಾಂಕ 09.02.2016 ರಂದು 10,000/- ರೂಪಾಯಿಗಳು ಮತ್ತು 19.02.2016 ರಂದು 10,000/- ರೂಪಾಯಿಗಳು ಹೀಗೆ ಒಟ್ಟು 12 ಕಂತುಗಳಲ್ಲಿ ಡ್ರಾ ಮಾಡಿಕೊಂಡು ಸರಕಾರಿ ನೌಕರನಾಗಿದ್ದುಕೊಂಡು ದುರ್ಬಳಕೆ ಮಾಡಿಕೊಂಡು ಆ ಮೂಲಕ ಭಾರತ ದಂಡ ಸಂಹಿತೆ ಕಲಂ.409 ಅಡಿಯಲ್ಲಿ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರು 2012-13 ನೇ ಸಾಲಿನಲ್ಲಿ ಹಿರೇಕೂಡ್ಲಿಗಿ ಸ.ಕಿ.ಪ್ರಾ.ಶಾಲೆಯ ಹೆಚ್ಚುವರಿ 02 ಶಾಲಾ ಕಟ್ಟಡಗಳ ನಿರ್ಮಾಣಕ್ಕಾಗಿ ಎಸ್.ಎಸ್.ಎ. ಯೋಜನೆ ಅಡಿಯಲ್ಲಿ ಬಂದಿರುವ ರೂ.5,27,000/- ಗಳು ಮತ್ತು ಶಾಲೆಯ ಇತರೆ ಅನುದಾನ ಸೇರಿ ಒಟ್ಟು ರೂ.7,01,224/- ಗಳನ್ನು ಎಸ್.ಎಸ್.ಎ ನಿಯಮಾವಳೀಗಳನ್ನು ಗಾಳಿಗೆ ತೂರಿ ಶಾಲಾ ಮುಖ್ಯಗುರುಗಳು ಮತ್ತು ಎಸ್.ಡಿ.ಎಂ.ಸಿ ಅಧ್ಯಕ್ಷರ ಹೆಸರಿನಲ್ಲಿ ಸ್ಟೇಟ್ ಬ್ಯಾಂಕ್ ಆಪ್ ಮೈಸೂರು, ದೇವದುರ್ಗ ಶಾಖೆಯಲ್ಲಿರುವ ಜಂಟಿ ಖಾತೆ ನಂ.6408270938 ನೇದ್ದರಲ್ಲಿ ಜಮಾ ಆಗಿದ್ದ ಹಣವನ್ನು ದಿನಾಂಕ 16.09.2015 ರಂದು 20,000/- ರೂಪಾಯಿಗಳು, ದಿನಾಂಕ 16.09.2015 ರಂದು 95,000/- ರೂಪಾಯಿಗಳು, ದಿನಾಂಕ 15.10.2015 ರಂದು 70,000/- ರೂಪಾಯಿಗಳು, ದಿನಾಂಕ 03.11.2015 ರಂದು 1,50,000/- ರೂಪಾಯಿಗಳು, ದಿನಾಂಕ 11.11.2015 ರಂದು 51,224/- ರೂಪಾಯಿಗಳು, ದಿನಾಂಕ 04.12.2015 ರಂದು 25,000/- ರೂಪಾಯಿಗಳು,

ದಿನಾಂಕ 28.12.2015 ರಂದು 30,000/- ರೂಪಾಯಿಗಳು, ದಿನಾಂಕ 31.12.2015 ರಂದು 50,000/- ರೂಪಾಯಿಗಳು, ದಿನಾಂಕ 06.01.2016 ರಂದು 50,000/- ರೂಪಾಯಿಗಳು, 30.01.2016 ರಂದು 95,000/-, ದಿನಾಂಕ 09.02.2016 ರಂದು 10,000/- ರೂಪಾಯಿಗಳು ಮತ್ತು 19.02.2016 ರಂದು 10,000/- ರೂಪಾಯಿಗಳು ಹೀಗೆ ಒಟ್ಟು 12 ಕಂತುಗಳಲ್ಲಿ ಡ್ರಾ ಮಾಡಿಕೊಂಡು ದುರ್ಬಳಕೆ ಮಾಡಿಕೊಂಡು ಸರಕಾರಕ್ಕೆ ಮೋಸ ಮಾಡುವ ಮೂಲಕ ಭಾರತ ದಂಡ ಸಂಹಿತೆ ಕಲಂ.420 ಅಡಿಯಲ್ಲಿ ಅಪರಾಧ ಮಾಡಿರುವಿರಿ.

ಸದರಿ ಅಪರಾಧಗಳು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತವೆ ಮತ್ತು ಸದರಿ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ದೋಷಾರೋಪಣೆಯನ್ನು ಈ ದಿನ ದಿನಾಂಕಃ 19.07.2025 ರಂದು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಆತನ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ದೇವದುರ್ಗ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ದೇವದುರ್ಗ ರವರ ನ್ಯಾಯಾಲಯ, ದೇವದುರ್ಗ.

**ಸಿ ಸಿ ನಂ.405/2023**

ಪಿರ್ಯಾದುದಾರರು : ಕರ್ನಾಟಕ ರಾಜ್ಯ,
ಗಬ್ಬೂರು ಪೊಲೀಸ ಠಾಣೆ,
ಗಬ್ಬೂರು.

– ವಿರುದ್ಧ –

ಆರೋಪಿಃ 1. ಬಸವರಾಜ ಕವಟಗಿ ತಾಯಿ ಶಾಂತವ್ವ

2. ಲಕ್ಕಪ್ಪ ತಂದೆ ವಿರುಪಾಕ್ಷಪ್ಪ

**:: <u>ಆಪಾದನೆ</u> ::**

1. ನಿಮಗೆ ಓದಿ ಹೇಳಿದ ಆಪಾದನೆ ಅರ್ಥವಾಯಿತಾ?

ಉತ್ತರಃ-

2. ನೀವು ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ-

ಮೇಲಿನ ಹೇಳಿಕೆಯನ್ನು ಆಪಾದಿತರಿಗೆ ತಿಳಿಯುವಂತೆ ಆತನ ಭಾಷೆಯಲ್ಲಿ ಓದಿ, ಹೇಳಿ ತಿಳಿಸಿ ಅವರ ಹೇಳಿಕೆ ಪಡೆದುದಾಗಿ ದೃಢೀಕರಿಸಿರುತ್ತೇನೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ದೇವದುರ್ಗ.

ಆರೋಪಿತರ ಸಹಿ